# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ    Kannada Daily

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.01 | Issue. 176 | Pages. 2 | Date: 20-05-2025, TUESDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 176 - ಪುಟಗಳು : 2 - 20 ಮೇ 2025 ಮಂಗಳವಾರ    Ph: 8762954248    ದರ : ₹1


# ಕರಿಮಲ್ಲೇಶ್ವರಸ್ವಾಮಿ ದೇಗುಲ ಸುತ್ತ ಗಣಿಗಾರಿಕೆ ಬೇಡ

## ವೀರದೇವನಹಳ್ಳಿ ಗ್ರಾಮಸ್ಥರ ಪ್ರತಿಭಟನೆ | ರಾಜಕೀಯ ಒತ್ತಡಕ್ಕೆ ಮಣಿಯಬೇಡಿ ಎಂದು ಒತ್ತಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ಮುಜರಾಯಿ ಇಲಾಖೆಗೆ ಒಳಪಡುವ ತಾಲ್ಲೂಕಿನ ವೀರದೇವನಹಳ್ಳಿಯ ಶ್ರೀ ಕರಿಮಲ್ಲೇಶ್ವರಸ್ವಾಮಿ ದೇಗುಲ ಸಮೀಪ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು ಅದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿ ಗ್ರಾಮಸ್ಥರು ಸೋಮವಾರ ದೇವಸ್ಥಾನ ಎದುರು ಪ್ರತಿಭಟನೆ ನಡೆಸಿದರು.

ಶ್ರೀ ಕರಿಮಲ್ಲೇಶ್ವರಸ್ವಾಮಿ ದೇಗುಲ ಸಮಿತಿ ಮುಖ್ಯಸ್ಥ ಚಂದ್ರೇಗೌಡ ಮಾತನಾಡಿ, ಶ್ರೀ ಕರಿಮಲ್ಲೇಶ್ವರ ದೇಗುಲಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ದೇಗುಲ ಮುಜರಾಯಿ ಇಲಾಖೆಗೆ ಒಳಪಟ್ಟಿದೆ. ಇಂತಹ ದೇಗುಲದ ಸುತ್ತ ಚನ್ನೇಹಳ್ಳಿ ಸರ್ವೆ ನಂ. 20ರಲ್ಲಿ ಕೆಲವರು ರಾಜಕೀಯ ಶಕ್ತಿ ಬಳಸಿಕೊಂಡು ಗಣಿಗಾರಿಕೆಗೆ ಮುಂದಾಗಿದ್ದಾರೆ. ಈಗಾಗಲೇ ಶ್ರೀ ಕರಿಮಲ್ಲೇಶ್ವರ ದೇಗುಲ ಜೀರ್ಣೋದ್ಧಾರಗೊಳಿಸುವ ಮೂಲಕ ನಿತ್ಯ ಪೂಜೆ ನಡೆಸಲಾಗಿದೆ. ಪ್ರತಿ ಹುಣ್ಣಿಮೆ ಮತ್ತು ಅಮವಾಸೆ ಕಾರ್ಯಕ್ರಮ ನಡೆಯುತ್ತವೆ. ನೂರಾರು ಭಕ್ತರು ಇಲ್ಲಿಗೆ ಬರುತ್ತಾರೆ. ಹೀಗಾಗಿ ದೇವಾಲಯ ಉಳಿಯಬೇಕೆಂದರೆ ಗಣಿಗಾರಿಕೆ ನಿಲ್ಲಬೇಕು ಎಂದರು.

ಇದಕ್ಕೆ ಗ್ರಾಮಸ್ಥರು ಮಾತ್ರವಲ್ಲದೆ ಜನಪ್ರತಿನಿಧಿಗಳು ಕೈ ಜೋಡಿಸಬೇಕು. ಶಾಸಕ ಹೆಚ್.ಕೆ. ಸುರೇಶ್ ಅವರ ಗಮನಕ್ಕೆ ವಿಚಾರ ತಂದಿದ್ದು ತಹಶೀಲ್ದಾರ್‌ಗೆ ದೂರು ನೀಡಲಾಗಿದೆ. ವಿಶೇಷವಾಗಿ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಯಾವ ಕಾರಣಕ್ಕು ಅನುಮತಿ ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಗ್ರಾಮ ಅನುಕೂಲಕ್ಕಾಗಿ ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

### ಚಿನ್ನದೇವರ ಗುಂಡಿ ಎಂಬ ಪ್ರತೀತಿ ಇದೆ

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸಿದ್ದೇಗೌಡ ಹಾಗೂ ಮುಖಂಡ ರಮೇಶಯ್ಯ ಮಾತನಾಡಿ, ವೀರದೇವನಹಳ್ಳಿ ಗ್ರಾಮಕ್ಕೆ ಹೊಯ್ಸಳರ ಕಾಲದ ಇತಿಹಾಸವಿದೆ.

900 ವರ್ಷಗಳ ಹಿಂದೆ ಇದೇ ಬಂಡೆಯಲ್ಲಿ ಚನ್ನಕೇಶವಸ್ವಾಮಿ ದೇಗುಲದ ಶಿಲ್ಪಿಗಳಿಗೆ ಮತ್ತು ದೇವರ ಮೂರ್ತಿ ತಯಾರಿಕೆಗೆ ಕಲ್ಲನ್ನು ಇಲ್ಲಿಂದ ತೆಗೆದುಕೊಂಡು ಹೋಗಿರುವ ಇತಿಹಾಸವಿದೆ. ಈಗಲೂ ಸುಮಾರು 100 ಅಡಿಯ ಚನ್ನೇದೇವರ ಗುಂಡಿ ಎಂಬ ಹೆಸರು ಇದೆ. ಈಗಾಗಲೇ ದೇಗುಲವನ್ನು ಗ್ರಾಮಸ್ಥರು ಒಂದಾಗಿ ಅಭಿವೃದ್ಧಿಪಡಿಸಿ ನಿತ್ಯ ದಾಸೋಹ, ಒಂದು ಕಿಲೋ ಮೀಟರ್ ಉದ್ದದ ರಸ್ತೆಯನ್ನು ಕೂಡ ಮಾಡಲಾಗಿದೆ.

ಆದರೂ ಕೆಲವರು ರಾಜಕೀಯ ಪ್ರಭಾವ ಬಳಸಿ ಗಣಿಗಾರಿಕೆಗೆ ಮುಂದಾಗಿರುವುದು ಖಂಡನೀಯ ಎಂದರು. ಗ್ರಾಮಸ್ಥರಾದ ಹಲಗಲೇಗೌಡ, ಶಿವೇಗೌಡ, ಹಾಲಪ್ಪ, ಶಿವಲಿಂಗಪ್ಪ, ಮೂರ್ತಿ, ಹೇಮಾಕುಮಾರ್, ಜಯರುದ್ರೇಗೌಡ, ದಯಾನಂದ, ಬಸವೇಗೌಡ, ಈಶ್ವರೇಗೌಡ ಹಾಗೂ ಇತರರಿದ್ದರು.

# ಧಾರಾಕಾರ ಮಳೆಗೆ ಕುಸಿದ ಮನೆ ಗೋಡೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ತಾಲ್ಲೂಕಿನಾದ್ಯಂತ ಭಾನುವಾರ ರಾತ್ರಿ ಸುರಿದ ವ್ಯಾಪಕ ಮಳೆಗೆ ಕೆಲವೆಡೆ ವಾಸದ ಮನೆಯ ಗೋಡೆಗಳು ಕುಸಿದು ಜನಜೀವನ ಅಸ್ತವ್ಯಸ್ತವಾಗಿದೆ.

ಹಿರೀಸಾವೆ ಗ್ರಾಮದ ಎಂ.ಜಿ. ರಸ್ತೆಯಲ್ಲಿರುವ ರಫೀಕ್ ಅವರ ವಾಸದ ಮನೆಯ ಅಡುಗೆ ಮತ್ತು ಸ್ನಾನದ ಕೋಣೆಗಳ ಭಾಗದ ಗೋಡೆಯು ಸೋಮವಾರ ಬೆಳಗ್ಗೆ 11 ಗಂಟೆಯಲ್ಲಿ ಹೊರಭಾಗಕ್ಕೆ ಕುಸಿದು ಬಿದ್ದಿದೆ. ಈ ಸಮಯದಲ್ಲಿ ಮನೆಯ ಮುಂದಿನ ಹಾಲಿನಲ್ಲಿ 5 ಜನರು ಕುಳಿತ್ತಿದ್ದರು. ಎಲ್ಲಾರು ಅಪಾಯದಿಂದ ಪಾರಾಗಿದ್ದಾರೆ. ಅಡುಗೆ ಮನೆಯ ಪಾತ್ರೆಗಳು ಮತ್ತು ದಿನಸಿ ಪದಾರ್ಥಗಳು ಸಂಪೂರ್ಣವಾಗಿ ಹಾಳಾಗಿವೆ.

ಹೋಬಳಿಯ ಮಾದಲಗೆರೆ ಗ್ರಾಮದ ಲಕ್ಷ್ಮಮ್ಮ ಎಂಬುವವರ ವಾಸದ ಮನೆಯ ಛಾವಣಿಯ ಸಿಮೆಂಟ್ ಶೀಟ್‌ಗಳು ಮಳೆ ಗಾಳಿಗೆ ಒಡೆದು ಹೋಗಿವೆ. ಮನೆಯಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ. ಈ ಎರಡು ಕಡೆಗೆ ಕಂದಾಯ ಇಲಾಖೆ ಮತ್ತು ಪಂಚಾಯಿತಿ ಅಧಿಕಾರಿಗಳು ಭೇಟಿನೀಡಿದ್ದಾರೆ ಎಂದು ಆರ್ ಐ ಯೋಗೇಶ್ ತಿಳಿಸಿದರು.

ಹಿರೀಸಾವೆ ಸೆಸ್ಕ್ ಶಾಖಾ ವ್ಯಾಪ್ತಿಯ ಜುಟ್ಟನಹಳ್ಳಿ ಬಳಿ ಮರ ಒಂದು ವಿದ್ಯುತ್ ಮಾರ್ಗದ ಮೇಲೆ ಬಿದ್ದು, ನಾಲ್ಕು ವಿದ್ಯುತ್ ಕಂಬ ಹಾಗೂ ಮಾರ್ಗಕ್ಕೆ ಹಾನಿಯಾಗಿದೆ ಎಂದು ಶಾಖಾಧಿಕಾರಿ ವೆಂಕಟೇಶ್ ತಿಳಿಸಿದರು.

# ಸ್ವಾವಲಂಬಿ ಬದುಕಿಗೆ ಓದು ಅತ್ಯವಶ್ಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಕ್ಕಳು ಕಾನೂನು ಅಧ್ಯಯನ ಮಾಡಿದರೆ ಸಮಾಜದಲ್ಲಿ ತಪ್ಪುಗಳಾದಾಗ ಅದನ್ನು ಖಂಡಿಸುವ ಹಾಗೂ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ದಾರಿ ಕಂಡುಕೊಳ್ಳಬಹುದು ಎಂದು ವಕೀಲೆ ಎಂ.ಬಿ. ಗಿರಿಜಾಂಬಿಕಾ ಹೇಳಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಹಿಳಾ ತಾಲ್ಲೂಕು ಘಟಕ ಮತ್ತು ತಣ್ಣೀರುಹಳ್ಳದ ಶ್ರೀ ಸಿದ್ದೇಶ್ವರ ಐಟಿಐ ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದರು.

18 ವರ್ಷದೊಳಗಿನ ಮಕ್ಕಳು ಯಾವ ಸ್ಥಳದಲ್ಲೇ ಇರಲಿ ಸಂವಿಧಾನ ನೀಡಿರುವ ಬದುಕುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ಪಡೆಯಬೇಕು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಉಂಟಾದಲ್ಲಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಮಕ್ಕಳ ಸಂರಕ್ಷಣೆ ದೃಷ್ಟಿಯಿಂದ ಪೋಕ್ಸೋ ಕಾಯ್ದೆ ಜಾರಿಗೊಳಿಸಲಾಗಿದೆ.

ಮಕ್ಕಳ ಸಂರಕ್ಷಣೆ ಸಮಾಜದ ಹೊಣೆ ಎಂದು ಹೇಳಿದರು. ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಪಾಟೀಲ್ ಮಾತನಾಡಿ, ಇಂದಿನ ಮಕ್ಕಳೇ ಮುಂದಿನ ಜವಾಬ್ದಾರಿಯುತ ಪ್ರಜೆಗಳು. ಅವರು ಕಾನೂನಿನ ಅರಿವು ಹೊಂದಿರಬೇಕು ಎಂದು ತಿಳಿಸಿದರು.

ಪ್ರಾಂಶುಪಾಲರಾದ ಕೆ.ಜೆ. ತುಂಗರಾಜು ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ವೀರಶೈವ ಮಹಿಳಾ ಘಟಕದ ತಾಲ್ಲೂಕು ಉಪಾಧ್ಯಕ್ಷೆ ಆಶಾದೇವಿ, ನಿರ್ದೇಶಕಿ ರತ್ನ ಸೋಮಶೇಖರ್, ಪ್ರಸನ್ನ, ತೋಟೇಶ್, ಧನಲಕ್ಷ್ಮಿ, ಶೀಲಾ ವಿಶ್ವನಾಥ್, ಇಂದಿರಾ, ಸುಶೀಲಾ, ಭಾಮಿನಿ, ದಾಕ್ಷಾಯಿಣಿ ನಾಗರತ್ನ ಹಾಗೂ ಇತರರಿದ್ದರು.

# ಗ್ರಾಮೀಣ ಬಡ ಮಕ್ಕಳಿಗೆ ವಸತಿ ಶಾಲೆ ವರದಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ವಸತಿ ಶಾಲೆಗಳು ಗ್ರಾಮೀಣ ಭಾಗದ ಬಡ, ಪ್ರತಿಭಾವಂತ ಮಕ್ಕಳ ಆಶಾಕಿರಣ ಮತ್ತು ಶೈಕ್ಷಣಿಕ ಜೀವನದ ನೆಲೆಯಾಗಿವೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಹಾನುಬಾಳು ಹೋಬಳಿ ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾವಿನಹಳ್ಳಿ ಗ್ರಾಮದಲ್ಲಿ ಸಮಾಜದ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ನಿರ್ಮಾಣವಾಗುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. 23 ಕೋಟಿ ರೂ. ವೆಚ್ಚದಲ್ಲಿ ವಸತಿ ಗೃಹ, ಅಡುಗೆ ಮನೆ, ಬೋಧಕ ಹಾಗೂ ಬೋಧಕೇತರ ಶಿಕ್ಷಕರ ವಸತಿ ಗೃಹ, ಕಂಪ್ಯೂಟರ್ ಕೊಠಡಿ, ಬೃಹತ್ ಸಭಾಂಗಣ ಸೇರಿದಂತೆ ಶಾಲಾ ಸಮುಚ್ಚಯ ನಿರ್ಮಾಣವಾಗಲಿದೆ. ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿ ಹೆಚ್ಚಾಗಿ ಸುಶಿಕ್ಷಿತರಾದಲ್ಲಿ ಕುಟುಂಬ ಹಾಗೂ ಸಮಾಜದ ಸಾಮಾಜಿಕ ಸಬಲತೆ ಸಾಧ್ಯವಾಗುತ್ತದೆ ಎಂದರು.

ಹಿಂದಿನ ಶೈಕ್ಷಣಿಕ ಪದ್ಧತಿಗೂ ಇಂದಿನ ಶೈಕ್ಷಣಿಕ ನೀತಿಗೂ ಬಹಳಷ್ಟು ವ್ಯತ್ಯಾಸಗಳಿದ್ದು, ರಾಷ್ಟ್ರವ್ಯಾಪಿ ಯಾವುದೇ ಮಗುವೂ ಶಿಕ್ಷಣದಿಂದ ವಂಚಿತರಾಗದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಶೈಕ್ಷಣಿಕ ಅಭಿವೃದ್ಧಿಯ ಕುರಿತಾದ ಯೋಜನೆಗಳನ್ನು ರೂಪಿಸಿ ಸರ್ವರಿಗೂ ಶಿಕ್ಷಣ ದೊರಕುವಂತೆ ಕಾರ್ಯಯೋಜನೆಗಳನ್ನು ಜಾರಿಗೆ ತಂದಿವೆ ಎಂದರು. ವಸತಿ ಶಾಲೆಗೆ ಅಗತ್ಯ ಸೌಲಭ್ಯಗಳು ಧಕ್ಕುವಂತಾಗಬೇಕು. ಬಡ ಮಕ್ಕಳಿಗೆ ಶಿಕ್ಷಣ ಸೌಲಭ್ಯ ಕಲ್ಪಿಸಬೇಕು ಎನ್ನುವ ವಸತಿ ಶಾಲೆಗಳ ಸದುದ್ದೇಶ ಸಾಕಾರಗೊಳಿಸುವ ನಿಟ್ಟಿನಲ್ಲಿ ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿ ಪೂರ್ಣಗೊಳ್ಳಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಚಿನ್, ವಸತಿ ಶಾಲೆಗಳ ಕೇಂದ್ರ ಕಚೇರಿ ಎಇಇ ನಟರಾಜ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಘು, ಗ್ರಾ.ಪಂ. ಉಪಾಧ್ಯಕ್ಷೆ ಪೂರ್ಣಿಮಾ ದಾರೇಶ್, ಸದಸ್ಯರಾದ ಉಮಾ, ಗೀತಾ, ಭಾಸ್ಕರ್, ಜಿಲ್ಲಾ ಬಿಜೆಪಿ ಮುಖಂಡ ರಾಜ್ ಕುಮಾರ್, ಆಶೀರ್ವಾದ್, ಅಗ್ನಿ ಸೋಮಶೇಖರ್, ಗುತ್ತಿಗೆದಾರ ಕೃಷ್ಣಮೂರ್ತಿ, ನಿವೃತ್ತ ತಹಶೀಲ್ದಾರ್ ಅಣ್ಣೇಗೌಡ, ಸಮಾಜ ಕಲ್ಯಾಣ ಇಲಾಖೆ ವ್ಯವಸ್ಥಾಪಕ ಪರಮೇಶ್ ಹಾಗೂ ಇತರರಿದ್ದರು.

# ಕೊಣನೂರು ಗ್ರಾಪಂ ಚುನಾವಣೆ ಕಾಂಗ್ರೆಸ್ ಬೆಂಬಲಿತರಿಗೆ ಗೆಲುವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕಿನ ಕೊಣನೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯರು ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ನಾಗರಾಜ್ ಬಿ. ಶೆಟ್ಟಿ ಹಾಗು ಉಪಾಧ್ಯಕ್ಷಾಗಿ ಪಾವನ ಸತೀಶ್ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಸ್ವಾಮಿ ಕಾರ್ಯನಿರ್ವಹಿಸಿದರು. ಚುನಾವಣೆ ಹಿನ್ನಲೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ತಹಶೀಲ್ದಾರ್ ಸೌಮ್ಯ ಅವರು ಬೆಳಿಗ್ಗೆಯಿಂದಲೂ ಗ್ರಾಮದಲ್ಲಿ ಮೊಕ್ಕಾಂ ಹೂಡಿ ಚುನಾವಣಾ ಕಾರ್ಯವನ್ನು ಸುಸೂತ್ರವಾಗಿ ಮುಗಿಸಿದರು.



21 ಸದಸ್ಯ ಬಲದ ಕೊಣನೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಮೂವರು ಸ್ಪರ್ಧೆ ಮಾಡಿದ್ದರು. ಕಾಂಗ್ರೆಸ್ ಬೆಂಬಲಿತ ನಾಗರಾಜ್ 12 ಮತ ಪಡೆದು ಗೆಲುವಿನ ನಗೆ ಬೀರಿದರೆ ಜೆಡಿಎಸ್ ಬೆಂಬಲದಿಂದ ಕಣಕ್ಕಿಳಿದಿದ್ದ ಶಿವಣ್ಣ ಕೆರೆಕೋಡಿ 6 ಹಾಗು ಉಮಾನಾ ಫಾತಿಮಾ 3 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಪಾವನಾ ಸತೀಶ್ 12 ಮತ ಗಳಿಸಿ ಗೆಲುವಿನ ನಗೆ ಬೀರಿದರೆ ಜೆಡಿಎಸ್ ಬೆಂಬಲಿತ ನಿಸ್ಬಾ ಅವರು 9 ಮತಗಳನ್ನಷ್ಟೇ ಪಡೆಯಲು ಶಕ್ತರಾದರು.

# ಮನೆಯಲ್ಲಿ ಬಿತ್ತನೆ ಬೀಜ ಮಾರಾಟ: ಅಧಿಕಾರಿಗಳ ದಾಳಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕಿನ ವಿವಿಧ ಕೃಷಿ ಪರಿಕರ ಮಾರಾಟ ಮಳಿಗೆಗಳ ಮೇಲೆ ಸೋಮವಾರ ದಾಳಿ ನಡೆಸಿದ ಕೃಷಿ ಇಲಾಖೆ ಜಾಗೃತಕೋಶ ತಂಡದ ಅಧಿಕಾರಿಗಳು ಅನಧಿಕೃತ ಅಂಗಡಿಗಳ ಮಾಲೀಕರಿಗೆ ನೋಟಿಸ್ ನೀಡಿ ಕಾನೂನು ಕ್ರಮದ ಎಚ್ಚರಿಕೆ ನೀಡಿದರು.

ಜಂಟಿ ಕೃಷಿ ನಿರ್ದೇಶಕ ಪಿ. ರಮೇಶಕುಮಾರ್, ಸಹಾಯಕ ಕೃಷಿ ನಿರ್ದೇಶಕ ತೀರ್ಥಪ್ರಸಾದ್, ಕೃಷಿ ನಿರ್ದೇಶಕ ಡಿ.ಕೆ. ಯೋಗಾನಂದ್ ಮತ್ತು ಸಹಾಯಕ ಕೃಷಿ ನಿರ್ದೇಶಕ ಜಾಗೃತಿ ಕೋಶ ಮಧುಸೂದನ್ ಅವರು ಹಳೇಬೀಡು, ಮಾದೀಹಳ್ಳಿ ಹೋಬಳಿ ಸೇರಿದಂತೆ ವಿವಿಧೆಡೆ ದಿಢೀರ್ ದಾಳಿ ನಡೆಸಿದರು.


ಅಂದಲೆ ಸಮೀಪದ ರಾಮಚಂದ್ರಪುರ ಗ್ರಾಮದ ಸಿದ್ದೇಗೌಡ ಅವರ ಮನೆಯಲ್ಲಿ ಪರವಾನಗಿ ಇಲ್ಲದೆ ಮಾರಾಟ ಮಾಡುತ್ತಿದ್ದ ಹೈಬ್ರಿಡ್ ಹೈಟೆಕ್ ಮುಸುಕಿನ ಬಿತ್ತನೆ ಬೀಜ ವಶಪಡಿಸಿಕೊಳ್ಳಲಾಯಿತು.

ಜಂಟಿ ಕೃಷಿ ನಿರ್ದೇಶಕ ಪಿ. ರಮೇಶಕುಮಾರ್ ಮಾತನಾಡಿ, ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳು ಬಿರುಸು ಪಡೆದಿವೆ. ಇಂತಹ ಸಂದರ್ಭದಲ್ಲಿ ಕೃಷಿಕರಿಗೆ ಗುಣಮಟ್ಟದ ಬಿತ್ತನೆ ಬೀಜ ಮತ್ತು ಅಗತ್ಯ ಪರಿಕರ ನೀಡಬೇಕು. ಹೀಗಾಗಿ ಜಾಗೃತಿದಳ ಮತ್ತು ಜಾಗೃತಿ ಕೋಶದಿಂದ ಜಿಲ್ಲೆಯ ವಿವಿಧೆಡೆ ದಾಳಿ ನಡೆಸಿ ಪರಿಶೀಲಿಸಲಾಗುತ್ತಿದೆ ಎಂದರು.

# ಶಕ್ತಿ ಯೋಜನೆ: 14.14 ಕೋಟಿ ಮಹಿಳೆಯರ ಪ್ರಯಾಣ

## ಸ್ವಾವಲಂಬಿ ಜೀವನಕ್ಕೆ ಗ್ಯಾರಂಟಿ ನೆರವು | ಜಿಲ್ಲೆಯ ನಾರಿಯರ ಮೆಚ್ಚುಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಜಿಲ್ಲೆಯಲ್ಲಿ ಅಭೂತಪೂರ್ವ ಯಶಸ್ಸು ಕಂಡಿದ್ದು ಯೋಜನೆ ಆರಂಭವಾದಾಗಿನಿಂದ 14.14 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ.

ಶಕ್ತಿ ಯೋಜನೆ ಜಾರಿಯಾಗಿ ಜೂನ್ 11ಕ್ಕೆ ಎರಡು ವರ್ಷ ಪೂರ್ಣಗೊಳ್ಳಲಿದೆ. ರಾಜ್ಯ ಸರ್ಕಾರಿ ಸ್ವಾಮ್ಯದ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿರುವ ಶಕ್ತಿ ಯೋಜನೆಯು ಮಹಿಳೆಯರನ್ನು ಮುಖ್ಯವಾಹಿನಿಗೆ ತಂದು ಪುರುಷರಿಗೆ ಸಮಾನವಾಗಿ ನಿಲ್ಲುವಂತೆ ಮಾಡುವ ಪ್ರಯತ್ನಕ್ಕೆ ಯೋಜನೆ ಸಹಕಾರಿಯಾಗಿದೆ.

ಶಕ್ತಿ ಯೋಜನೆ ನಿಜಕ್ಕೂ ಮಹಿಳೆಯರಲ್ಲಿ ಶಕ್ತಿ ತುಂಬಿದೆ. ಇದರಿಂದ ಮಹಿಳೆಯರಿಗೆ ತುಂಬಾ ಅನುಕೂಲವಾಗಿದೆ. ಖಾಸಗಿ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಬಹಳಷ್ಟು ಅನೂಕೂಲವಾಗಿದೆ. ಪ್ರಯಾಣ ದರವನ್ನು ಭರಿಸಲು ಒಂದೊತ್ತಿನ ಊಟವನ್ನೇ ತೊರೆಯುವ ಪರಿಸ್ಥಿತಿ ಇತ್ತು. ಈಗ ಶಕ್ತಿ ಯೋಜನೆಯಿಂದ ಎಲ್ಲಾ ಮಹಿಳೆಯರು ನೆಮ್ಮದಿಯಿಂದ ಪ್ರಯಾಣಿಸಲು ಸಾಧ್ಯವಾಗಿದೆ.

> ನಾನು ತುಮಕೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಶಕ್ತಿ ಯೋಜನೆಯಿಂದ ಸಂಚಾರಕ್ಕೆ ಭಾರೀ ಅನುಕೂಲವಾಯಿತು. ಬಡ ಮಧ್ಯಮ ಕುಟುಂಬದ ಮಕ್ಕಳಾದ ನಾವು ಪ್ರಯಾಣದ ಹಣಕ್ಕಾಗಿ ಆಲೋಚಿಸಬೇಕಾಗಿತ್ತು. ರಜೆ ಸಮಯವು ಊರಿಗೆ ಬಂದು ಹೋಗುವುದಕ್ಕೂ ಚಿಂತಿಸಬೇಕಾಗಿತ್ತು. ಆದರೆ ಸರ್ಕಾರ ಉಚಿತ ಬಸ್ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿರುವುದು ಬಹಳ ಅನುಕೂಲವಾಗಿದೆ.
>
> – ರಂಜಿತಾ, ಹಾಸನ



ರಾಜ್ಯದ ನಿವಾಸಿ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನಗರ ಸಾರಿಗೆ, ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಶಕ್ತಿ ಯೋಜನೆ ಅವಕಾಶ ಕಲ್ಪಿಸಿದೆ.

ರಾಜ್ಯದಲ್ಲಿ ಪ್ರತಿದಿನ ಸರಾಸರಿ 50 ರಿಂದ 60 ಲಕ್ಷ ಮಹಿಳಾ ಪ್ರಯಾಣಿಕರಿಗೆ ಈ ಯೋಜನೆಯಿಂದ ಅನುಕೂಲವಾಗುತ್ತಿದೆ. ಮಹಿಳೆಯರು ದೂರದ ಪಟ್ಟಣಗಳಿಗೆ ತೆರಳಿ ಹೆಚ್ಚಿನ ಆದಾಯದ ಉದ್ಯೋಗ ಹೊಂದಲು ಸಹಕಾರಿಯಾಗಿದೆ. ಶಕ್ತಿ ಯೋಜನೆಯು ಓದುವ ಹೆಣ್ಣು ಮಕ್ಕಳ ಕನಸುಗಳಿಗೆ ರೆಕ್ಕೆ ಮೂಡಿಸಿದೆ.

ಜಿಲ್ಲೆಯಲ್ಲಿ 8 ತಾಲ್ಲೂಕುಗಳಿದ್ದು ಹಾಸನ, ಆಲೂರು, ಅರಕಲಗೂಡು, ಚನ್ನರಾಯಪಟ್ಟಣ, ಹೊಳೆನರಸೀಪುರ ತಾಲ್ಲೂಕುಗಳು ಹಾಸನ ವಿಭಾಗಕ್ಕೆ ಹಾಗೂ ಸಕಲೇಶಪುರ, ಬೇಲೂರು, ಅರಸೀಕೆರೆ ತಾಲ್ಲೂಕುಗಳು ಚಿಕ್ಕಮಗಳೂರು ವಿಭಾಗ ವ್ಯಾಪ್ತಿಗೆ ಒಳಪಡುತ್ತವೆ.

ಶಕ್ತಿ ಯೋಜನೆ ಪ್ರಾರಂಭವಾದ 2023 ಜೂನ್ 11 ರಿಂದ 2025 ಮೇ 15ರ ವರೆಗೆ ಹಾಸನ ಜಿಲ್ಲೆಯಲ್ಲಿ ಸಾಮಾನ್ಯ, ನಗರ ಹಾಗೂ ವೇಗದೂತ ಬಸ್‌ಗಳಲ್ಲಿ ಪ್ರಯಾಣಿಸಿದ 14.14 ಕೋಟಿ ಮಹಿಳೆಯರಿಗೆ ಶೂನ್ಯ ಟಿಕೆಟ್ ಅನ್ನು ನೀಡಲಾಗಿದೆ. ಹಾಸನ ವಿಭಾಗಕ್ಕೆ 472.70ಕೋಟಿ ರೂಪಾಯಿ ಆದಾಯ ಲಭಿಸಿದೆ.

ಪ್ರತಿ ನಿತ್ಯ ಅಂದಾಜು 67 ಲಕ್ಷ ರೂ. ಆದಾಯವಾಗುತ್ತಿದ್ದು, 2 ಲಕ್ಷ ಮಹಿಳೆಯರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.

# ಸರ್ಕಾರದ 2 ವರ್ಷದ ಸಾಧನೆ ಶೂನ್ಯ : ಸಿಮೆಂಟ್ ಮಂಜು

ಹಾಸನ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದಿದ್ದು ಅಭಿವೃದ್ಧಿ ಮಾತ್ರ ಶೂನ್ಯವಾಗಿದೆ. ಯಾವ ನೈತಿಕತೆಯಿಂದ ಇವರು ಸಮಾವೇಶ ಮಾಡುತ್ತಿದ್ದಾರೆ ಎಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಭ್ರಷ್ಟಾಚಾರ, ಆಂತರಿಕ ಕಲಹದಿಂದ ರಾಜ್ಯದ ಜನರು ನಲುಗಿದ್ದಾರೆ. ನಿತ್ಯ ಸಂಘರ್ಷಗಳು ನಡೆಯುತ್ತಿದ್ದು ಸಾಮರಸ್ಯ ಮರೆಯಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಜನನ ಪ್ರಮಾಣ ಪತ್ರದಿಂದ ಮರಣ ಪ್ರಮಾಣ ಪತ್ರದವರೆಗೆ ಪ್ರತಿಯೊಂದಕ್ಕೂ ಲಂಚ ನೀಡಲೇಬೇಕು. ಕರ್ನಾಟಕದಲ್ಲಿ ಲೂಟಿ ಮಾಡಿದ ಕೋಟ್ಯಂತರ ರೂಪಾಯಿ ಹಣವನ್ನು ಪಕ್ಷದ ಹೈಕಮಾಂಡ್‌ಗೆ ಮತ್ತು ಇತರ ರಾಜ್ಯಗಳ ಚುನಾವಣೆಗಳಿಗೆ ಅಕ್ರಮವಾಗಿ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮುಡಾ, ವಾಲ್ಮೀಕಿ ಹಗರಣ ರಾರಾಜಿಸುತ್ತಿವೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆರೋಪಿ ಸ್ಥಾನದಲ್ಲಿದ್ದಾರೆ. ಕಾರ್ಮಿಕ ಇಲಾಖೆ, ಇಂಧನ ಇಲಾಖೆಯಲ್ಲೂ ಅವ್ಯಾಹತ ಭ್ರಷ್ಟಾಚಾರ ನಡೆಯುತ್ತಿದೆ. ಇದೆಲ್ಲವನ್ನೂ ಮರೆಮಾಚಿ ಕೇವಲ ಜಾಹೀರಾತು ಮೂಲಕ ರಾಜ್ಯ ಸರ್ಕಾರ ಜನರ ವಿಶ್ವಾಸ ಗಳಿಸಲು ಮುಂದಾಗಿದೆ ಎಂದು ಟೀಕಿಸಿದರು.





### ಮುಸ್ಲಿಂ ಓಲೈಕೆ

ವಿಧಾನಸೌಧದಂತಹ ಪವಿತ್ರ ಸ್ಥಳದಲ್ಲೇ ಪಾಕಿಸ್ತಾನ್ ಜಿಂದಾಬಾದ್ ಎಂಬ ದೇಶದ್ರೋಹಿ ಘೋಷಣೆಗಳು ಕೇಳಿಬಂದರೂ, ಸರ್ಕಾರ ಅದನ್ನು ಮರೆಮಾಚಲು ಪ್ರಯತ್ನಿಸಿತು. ಕಾಂಗ್ರೆಸ್‌ನದ್ದು ಕೇವಲ ಮುಸ್ಲಿಂ ಓಲೈಕೆ ಹಲಾಲ್ ಬಜೆಟ್. ಹಿಂದುಗಳ ತೆರಿಗೆ ಹಣವನ್ನು ಕೇವಲ ಓಲೈಕೆಗಾಗಿ ಉರ್ದು ಶಾಲೆ, ಇಮಾಮ್‌ಗಳಿಗೆ ನೀಡುತ್ತಿದ್ದಾರೆ. ಅಲ್ಪಸಂಖ್ಯಾತರ ಕಾಲನಿ ಅಭಿವೃದ್ಧಿಗೆ ಸಾವಿರ ಕೋಟಿ ರೂ. ವ್ಯಯಿಸುತ್ತಿದ್ದಾರೆ ಎಂದರು.

### ಕಾನೂನು ಸುವ್ಯವಸ್ಥೆ ಹಾಳು

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಎಂತದೇ ಗಂಭೀರ ಪ್ರಕರಣ ನಡೆದರೂ ಗೃಹ ಸಚಿವರು ಹಾರಿಕೆಯ ಉತ್ತರ ನೀಡುತ್ತಾರೆ. ಹಿಂದು ಕಾರ್ಯಕರ್ತರ ಹತ್ಯೆ, ಜೈನ ಮುನಿ ಹತ್ಯೆ, ನೇಹಾ ಹಿರೇಮಠ ಕೊಲೆ ಸೇರಿದಂತೆ ಕೊಲೆ, ಸುಲಿಗೆ, ಅತ್ಯಾಚಾರಗಳು ಮಿತಿಮೀರಿವೆ. ಲವ್ ಜಿಹಾದ್ ಹಾವಳಿ ಹೆಚ್ಚಾಗಿದೆ. ಡ್ರಗ್ಸ್ ಮಾಫಿಯಾ ಮತ್ತೆ ಸಕ್ರಿಯವಾಗಿದೆ. ನಿಷೇಧಿತ ಸಂಘಟನೆಗಳು ಮತ್ತೆ ಪುಟಿದೇಳುತ್ತಿವೆ. ಆದರೂ ಸರ್ಕಾರ ಕ್ರಮ ಜರುಗಿಸುತ್ತಿಲ್ಲ ಎಂದು ಆರೋಪಿಸಿದರು.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಖಜಾಂಚಿ ಶೋಭನ್ ಬಾಬು, ನಗರಾಧ್ಯಕ್ಷ ಯೋಗೀಶ್, ಮಂಜು ಇತರರು ಉಪಸ್ಥಿತರಿದ್ದರು.

# ಗುರು ತೋರಿದ ದಾರಿಯಲ್ಲಿ ಜೀವನ ನಡೆಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಗುರು ತೋರಿದ ದಾರಿಯಲ್ಲಿ ಜೀವನವೆಂಬ ತೇರನ್ನು ಎಳೆದರೆ ಯಾವ ವಿಘ್ನಗಳು ಎದುರಾಗುವುದಿಲ್ಲ ಎಂದು ಮಹಾರಾಷ್ಟ್ರದ ಸಂಸ್ಕೃತ ವಿದ್ವಾನ್ ಪ್ರವೀಣ ರಾಮಚಂದ್ರ ಶಾಸ್ತ್ರಿ ಹೇಳಿದರು.

ನಗರದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಹಮ್ಮಿಕೊಂಡಿದ್ದ ಗುರು ತೋರಿದ ದಾರಿ ತಿಂಗಳ ಮಾಮನ ತೇರು 128ನೇ ಹುಣ್ಣಿಮೆ ಕಾರ್ಯಕ್ರಮದ ಅಂಗವಾಗಿ 7 ದಿನಗಳ ಕಾಲ ನಡೆದ ಆಧ್ಯಾತ್ಮಿಕ ಚಿಂತನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಮಾತನಾಡಿದ ಅವರು, ಗುರುವಿನ ಸತ್ಸಂಗ ನಮ್ಮನ್ನು ಪರಮಾತ್ಮನೆಡೆಗೆ ಕರೆದೊಯ್ಯುತ್ತದೆ ಎಂದರು.

ಗುರುವಿಗೆ, ಗುರುತ್ವಕ್ಕೆ ಇರುವ ಶಕ್ತಿಯನ್ನು ಅಲಕ್ಷ್ಯ ಮಾಡಬಾರದು. ಗುರುವಿಗೆ ಪೂಜನೀಯ ಸ್ಥಾನ ನೀಡಬೇಕು. ಗುರು ತೋರುವ ಸನ್ಮಾರ್ಗದಲ್ಲಿ ನಡೆದು ನಮ್ಮಲ್ಲಿ ಮೂಡುವ ಜ್ಞಾನವನ್ನು ಪಸರಿಸುವ ಕೆಲಸ ಮಾಡಿದಾಗ ಮಾತ್ರ ಬದುಕಿಗೆ ಅರ್ಥ ಎಂದರು.

ಮನುಷ್ಯ ಯಾವುದರಿಂದ ತನ್ನ ಧಾರಣೆಯಾಗುತ್ತದೆ ಎಂಬುದನ್ನು ಅರಿಯಬೇಕು. ಸತ್ಯ, ದಾನ, ದಯಾ, ತಪಸ್ಸನ್ನು ರೂಢಿಸಿಕೊಂಡವರಿಗೆ ಮೋಕ್ಷ ದೊರೆಯಲಿದೆ. ಆತ ಸಮಾಜ ಹಾಗೂ ಭಗವಂತನಿಗೆ ಹತ್ತಿರವಾಗಿ ಶಾಶ್ವತನಾಗಿ ಉಳಿಯುತ್ತಾನೆ ಎಂದರು.

# ರಾಮನಾಥಪುರ ಸೇತುವೆ ಕೆಲಸ ನಿಧಾನ: ಪ್ರಯಾಣಿಕರ ಹೈರಾಣ

## ಅಧಿಕಾರಿ, ಗುತ್ತಿಗೆದಾರರ ನಿರ್ಲಕ್ಷ್ಯ ಜನರ ಗೋಳು ಹೇಳತೀರದು

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಕಲಗೂಡು: ತಾಲ್ಲೂಕಿನ ರಾಮನಾಥಪುರದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಹೊಸ ಸೇತುವೆಯ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿರುವುದರಿಂದ ವಾಹನ ಸವಾರರು ಭಾರೀ ತೊಂದರೆ ಅನುಭವಿಸುತ್ತಿದ್ದಾರೆ.

ಮೈಸೂರು ಅರಸರ ಕಾಲದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹಳೆಯ ಸೇತುವೆ 100 ವರ್ಷ ಪೂರೈಸಿದೆ. ಹಳೆಯ ಸೇತುವೆ ಕಿಷ್ಕಿಂಧೆಯಾಗಿದ್ದು ಶಿಥಿಲಾವಸ್ಥೆಗೆ ತಲುಪಿದ ಕಾರಣ 2017ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಹಾಗೂ ಶಾಸಕ ಎ. ಮಂಜು ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ 30 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿತ್ತು.

ದುರಾದೃಷ್ಟವಶಾತ್ ದೇವರು ಕೊಟ್ಟರೂ ಪೂಜಾರಿ ವರ ಕೊಡಲ್ಲ ಎನ್ನುವ ಗಾದೆ ಮಾತಿನಂತೆ ಸರ್ಕಾರ ದೊಡ್ಡ ಮೊತ್ತದ ಅನುದಾನ ನೀಡಿದರೂ ಕಾಮಗಾರಿ ಕಳೆದ ಏಳು ವರ್ಷಗಳಿಂದ ಮುಗಿಯದೆ ನನೆಗುದಿಗೆ ಬಿದ್ದಿದೆ.

222 ಕೋಟಿ ರೂ. ವೆಚ್ಚದ ಹಾಸನ-ಪಿರಿಯಾಪಟ್ಟಣ ರಸ್ತೆ ಕಾಮಗಾರಿ ಮುಗಿದಿದೆ. ಈ ಮಾರ್ಗದಲ್ಲಿ ಹಾದು ಹೋಗಿರುವ ರಾಮನಾಥಪುರದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹಳೆಯ ಸೇತುವೆ ಪಕ್ಕ ಹೊಸ ಬದಲಿ ಸೇತುವೆ ನಿರ್ಮಿಸಬೇಕು ಎನ್ನುವ ಕೂಗು ಸಾರ್ವಜನಿಕರ ಹಲವಾರು ವರ್ಷಗಳ ಬೇಡಿಕೆಯಾಗಿತ್ತು. ಜನರ ಬೇಡಿಕೆಗೆ ಸ್ಪಂದಿಸಿದ ಸರ್ಕಾರ ಹೊಸ ಸೇತುವೆ ಸ್ಥಾಪಿಸಲು ಅನುಮೋದನೆ ನೀಡಿತ್ತು. ಆದರೆ ಕಾಮಗಾರಿ ಗುತ್ತಿಗೆ ವಹಿಸಿಕೊಂಡಿರುವ ಬಿಎಸ್‌ಆರ್ ಕಂಪನಿ ತನಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ದುರ್ನಡೆತೆ ತೋರುತ್ತಿದೆ.



### ಹಳೆಯ ಸೇತುವೆ ದುಸ್ಥಿತಿ ಹೇಳತೀರದು

ಶತಮಾನಗಳಿಂದಲೂ ಹಳೆಯ ಸೇತುವೆ ಮೇಲೆ ಪ್ರತಿನಿತ್ಯ ಬಿಡುವಿಲ್ಲದೆ ಸಂಚರಿಸುವ ಅಧಿಕ ಭಾರ ಹೊತ್ತ ಲಾರಿ, ಕೆಎಸ್‌ಆರ್‌ಟಿಸಿ ಬಸ್‌ಗಳು ಸೇರಿ ನೂರಾರು ವಾಹನಗಳು ಓಡಾಡುತ್ತವೆ.

ಲೋಕೋಪಯೋಗಿ ಇಲಾಖೆ ಇತ್ತ ಹಳೆಯ ಸೇತುವೆಯನ್ನೂ ಕೂಡ ನಿರ್ವಹಣೆ ಮಾಡದೆ ಕೈಚೆಲ್ಲಿದೆ. ಹಳೆಯ ಸೇತುವೆ ಆಗಿನ ಕಾಲಕ್ಕೆ ತಕ್ಕಂತೆ ಕಿರಿದಾಗಿ ನಿರ್ಮಿಸಿದ್ದರೂ ಇಂದಿಗೂ ಸುಭದ್ರವಾಗಿದೆ. ಸೇತುವೆ ನಿರ್ವಹಣೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯಿಸಲಾಗಿದೆ. ಹಳೆಯ ಸೇತುವೆಯ ಎರಡು ಕಡೆಗಳಲ್ಲಿ ಗಿಡಗಂಟಿಗಳು ಮರದ ಗಾತ್ರವಾಗಿ ಬೆಳೆದಿವೆ. ಗಿಡಗಂಟಿಗಳಿಂದ ಆವರಿಸಿ ಸೇತುವೆ ಸಡಿಲಗೊಳ್ಳುತ್ತಿದ್ದು ಭದ್ರತೆಗೆ ಅಪಾಯ ತಂದೊಡ್ಡಿದೆ. ಅವಸಾನದತ್ತ ಸಾಗಿರುವ ಹಳೆಯ ಸೇತುವೆ ದುಸ್ಥಿತಿ ಹೇಳತೀರದಾಗಿದೆ.

### ಆತಂಕದ ಪ್ರಯಾಣ

ಹಾಸನ-ಪಿರಿಯಾಪಟ್ಟಣ ಮಾರ್ಗದ ರಸ್ತೆ ನಿರ್ಮಾಣವಾದ ನಂತರ ಈ ಮಾರ್ಗದಲ್ಲಿ ಓಡಾಡುವ ವಾಹನಗಳ ಸಂಖ್ಯೆಯೂ ದುಪ್ಪಟ್ಟಾಗಿದೆ. ನೆರೆಯ ಕೇರಳ ರಾಜ್ಯದ ಲಾರಿಗಳು, ವಾಹನಗಳು ಇದೇ ರಸ್ತೆಯಲ್ಲಿ ಸೇತುವೆ ಮೇಲೆ ಸಂಚರಿಸುತ್ತವೆ. ಸೇತುವೆ ಮೇಲಿನ ರಸ್ತೆ ಕೂಡ ಗುಂಡಿ ಬಿದ್ದು ಹಾಳಾಗಿದೆ. ಎರಡು ವಾಹನಗಳು ಎದುರು ಬದುರಾದರೆ ವಾಹನ ಸವಾರರು ಮುಂದೆ ಚಲಿಸಲು ಹರಸಾಹಸ ಪಡಬೇಕು. ಕಾವೇರಿ ನದಿ ಪ್ರವಾಹದ ಹೊಡೆತಕ್ಕೆ ಸಿಲುಕಿ ನಲುಗುತ್ತಿದ್ದು ನೂರು ವರ್ಷ ಪೂರೈಸಿರುವ ಕಿಷ್ಕಿಂದೆಯಂತಿರುವ ಹಾಳಾದ ಸೇತುವೆ ರಸ್ತೆ ಮೇಲೆ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡು ದುಸ್ಥಿತಿ ಎದುರಾಗಿದೆ.

ರಾಮನಾಥಪುರ ಕಾವೇರಿ ನದಿ ದಂಡೆ ಮೇಲೆ ಪುರಾತನವಾದಿ ಐತಿಹಾಸಿಕ ದೇವಾಲಯಗಳಿವೆ. ನದಿಯಲ್ಲಿ ಪವಿತ್ರವಾದ ಪುರಾತನ ಬಂಡೆ ಸ್ಮಾರಕಗಳು, ಗೋಗರ್ಭ ಗುಹೆ ಇದೆ. ನದಿಗೆ ಅಡ್ಡಲಾಗಿ ಹಾದು ಹೋಗಿರುವ ಸೇತುವೆ ಎರಡು ಕಡೆ ಐತಿಹಾಸಿಕ ಸ್ಮಾರಕಗಳಿವೆ. ಒಂದು ಕಡೆ ಅಗಸ್ತ್ಯೇಶ್ವರ, ಪ್ರಸನ್ನ ಸುಬ್ರಹ್ಮಣ್ಯೇಶ್ವರ, ಮತ್ತೊಂದು ಕಡೆ ಶ್ರೀ ರಾಮೇಶ್ವರ ಹಾಗೂ ಶ್ರೀ ಲಕ್ಷ್ಮಣೇಶ್ವರ ದೇವಾಲಯವಿದೆ. ರಾಮೇಶ್ವರ ದೇವಾಲಯದಿಂದ ಲಕ್ಷ್ಮಣೇಶ್ವರ ದೇವಾಲಯದ ನಡುವೆ ನದಿಗೆ ಅಡ್ಡಲಾಗಿ ತೂಗು ಸೇತುವೆ ಆಗಬೇಕು ಎಂಬುದು ಭಕ್ತರ ಅಭಿಲಾಷೆಯಾಗಿತ್ತು. ಆದರೆ ಹೊಸ ಸೇತುವೆ ಮಂಜೂರಾದ ನಂತರ ತೂಗು ಸೇತುವೆ ಪ್ರಸ್ತಾಪ ಸಹ ಹಿನ್ನೆಲೆಗೆ ಸರಿಯಿತು. ಇತ್ತ ಹೊಸ ಸೇತುವೆ ಕಾಮಗಾರಿ ಇಂದಿಗೂ ಮುಗಿದಿಲ್ಲ. ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಪ್ರಸನ್ನ ಸುಬ್ರಹ್ಮಣ್ಯಸ್ವಾಮಿ, ಶ್ರೀ ರಾಮೇಶ್ವರ ದೇವಾಲಯಕ್ಕೆ ತೆರಳುವ ರಸ್ತೆ ಹಳ್ಳದಲ್ಲಿ ಜನರ ಓಡಾಟಕ್ಕೆ ಕಿರಿಕಿರಿಯಾಗಿದೆ.

### ಭೂ ಸ್ವಾಧೀನ ಪ್ರಕ್ರಿಯೆಗೆ ಅಡ್ಡಿ

ಈಗಾಗಲೇ ಹಳೆಯ ಸೇತುವೆ ಪಕ್ಕದಲ್ಲಿಯೇ ಹೊಸ ಸೇತುವೆಯ ಕಾಮಗಾರಿ ನದಿ ಹರಿಯುವ ಜಾಗದಲ್ಲಿ ಪೂರ್ಣಗೊಂಡಿದೆ. ನೂತನ ಸೇತುವೆಯಿಂದ ಎರಡು ಬದಿಯ ಸಾರ್ವಜನಿಕ ರಸ್ತೆಗೆ ಸಂಪರ್ಕ ಕಲ್ಪಿಸಬೇಕಾದರೆ ಖಾಸಗಿ ಭೂಮಿ ಸ್ವಾಧೀನಪಡಿಸಿಕೊಂಡು ಪೂರ್ಣಗೊಳಿಸಬೇಕಿದೆ. ಈ ಕೆಲಸವನ್ನು ಕೆಆರ್‌ಡಿಸಿಎಲ್ ಕಿಂಚಿತ್ತೂ ತಲೆಕೆಡಿಸಿಕೊಂಡಿಲ್ಲ. ಅದರಿಂದ ನೂತನ ಸೇತುವೆ ಕೆಲಸ ಶೇ.90ರಷ್ಟು ಪೂರ್ಣಗೊಂಡಿದ್ದು, ಉಳಿದ ಕೆಲಸ ಬಾಕಿ ಇದೆ. ಈ ಕೆಲಸ ಕಳೆದ ಎರಡು ವರ್ಷಗಳಿಂದಲೂ ಕುಂಟುತ್ತಾ ಸಾಗಿದೆ. ಹೊಸ ಸೇತುವೆ ಕಾಮಗಾರಿ ನಡೆದಿರುವ ಪಕ್ಕದಲ್ಲಿ ಮೀನುಗಾರಿಕೆ ಇಲಾಖೆಗೆ ಸೇರಿದ ಜಾಗವಿದ್ದು ಮೂರು ಕಟ್ಟಡಗಳಿವೆ. ಈ ಕಟ್ಟಡಗಳ ತೆರವು ಹಾಗೂ ಭೂ ಸ್ವಾಧೀನಕ್ಕೆ ಕೆಆರ್‌ಡಿಸಿಎಲ್ ಅಗತ್ಯವಿರುವ ಅನುದಾನ ಒದಗಿಸಿಲ್ಲ ಎನ್ನುವ ಕಾರಣದಿಂದಾಗಿ ಕೂಡು ರಸ್ತೆ ನಿರ್ಮಾಣವಾಗಿಲ್ಲ. ಕೆಎಆರ್‌ಡಿಸಿಎಲ್ ಹಾಗೂ ಗುತ್ತಿಗೆದಾರನ ನಿರ್ಲಕ್ಷ್ಯ ಧೋರಣೆಯಿಂದಾಗಿ ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿದೆ.

> ಸೇತುವೆ ಕಾಮಗಾರಿಯ ಕೂಡು ರಸ್ತೆ ನಿರ್ಮಿಸಲು ಭೂ ಸ್ವಾಧೀನ ಪ್ರಕ್ರಿಯೆ ತೊಡಕಾಗಿದೆ. ಈ ಸಂಬಂಧ ಮೇಲಧಿಕಾರಿಗಳಿಗೆ ಹಲವು ಬಾರಿ ಪತ್ರ ಬರೆಯಲಾಗಿದೆ. ಕೆಆರ್‌ಡಿಸಿಎಲ್ ಎಂಡಿ ಸ್ಥಳದಲ್ಲಿ ಹಾಜರಿದ್ದು ಸಮಸ್ಯೆ ಬಗೆಹರಿಸಬೇಕು.
>
> **– ಭರತ್, ಕೆಆರ್‌ಡಿಸಿಎಲ್ ವಿಭಾಗೀಯ ಎಂಜಿನಿಯರ್, ಮೈಸೂರು**

## ಅಕ್ಕನಹಳ್ಳಿ ಗ್ರಾಮದಲ್ಲಿ ಬಿಎಂಸಿ ಘಟಕ ಉದ್ಘಾಟನೆ



ಚನ್ನರಾಯಪಟ್ಟಣ: ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಅಳವಡಿಸಿಕೊಂಡಿರುವ ಅದೆಷ್ಟೋ ರೈತ ಕುಟುಂಬಗಳ ಬದುಕು ಹಸನಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಅಕ್ಕನಹಳ್ಳಿ ಗ್ರಾಮದಲ್ಲಿ ಸೋಮವಾರ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ 32 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಬಿಎಂಸಿ ಘಟಕ ಹಾಗೂ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿ, ಹೈನುಗಾರಿಕೆಯಿಂದ ಆರ್ಥಿಕವಾಗಿ ಬದುಕನ್ನು ಸದೃಢಗೊಳಿಸಿಕೊಂಡಿದ್ದಾರೆ ಎಂದರು.

ನೂತನ ಕಟ್ಟಡ ನಿರ್ಮಾಣಕ್ಕೆ ಕೆಎಂಎಫ್ ವತಿಯಿಂದ 4.50 ಲಕ್ಷ ರೂ., ಹಾಸನ ಹಾಲು ಒಕ್ಕೂಟದಿಂದ 3 ಲಕ್ಷ ರೂ. ಹಾಗು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 1.50 ಲಕ್ಷ ರೂ. ಅನುದಾನ ಲಭ್ಯವಾಗಿದೆ ಎಂದು ತಿಳಿಸಿದರು.

ಹೈನುಗಾರಿಕೆಯು ತಾಲ್ಲೂಕಿನ ರೈತರ ಕೈ ಬಲಪಡಿಸುವಲ್ಲಿ ಯಶಸ್ವಿಯಾಗಿದೆ. ಪ್ರಸ್ತುತ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ಸುಮಾರು 21 ಲಕ್ಷ ರೂ. ಆದಾಯದಲ್ಲಿದ್ದು ಸಂಘದ ಎಲ್ಲರ ಪರಿಶ್ರಮದಿಂದ ಸಂಘ ಆದಾಯ ಗಳಿಸಲು ಸಾಧ್ಯವಾಗಿದೆ. ಜಿಲ್ಲೆಯಲ್ಲಿ ಹೈನೋದ್ಯಮದ ಬೆಳವಣಿಗೆಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಹೆಚ್.ಡಿ. ರೇವಣ್ಣ ಅವರ ಪರಿಶ್ರಮದಿಂದ ಹಾಸನ ಹಾಲು ಒಕ್ಕೂಟ ರಾಜ್ಯದಲ್ಲೇ 2ನೇ ಸ್ಥಾನದಲ್ಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

## 8.98 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಅರಸೀಕೆರೆ: ಇಲ್ಲಿನ ಮಾರುತಿ ನಗರದಲ್ಲಿ ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 8.98 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ.

ನಿವಾಸಿ ಉಮರ್ ಫಾರುಕ್ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಸಹೋದರನ ನಿವೇಶನ ಖರೀದಿಸಿದ್ದ ಅವರು ಅದಕ್ಕೆ ನೀಡುವ ಹಣವನ್ನು ಮನೆಯಲ್ಲಿಟ್ಟಿದ್ದರು. ಗುರುವಾರ ಮನೆಯಲ್ಲಿದ್ದ ಚಿನ್ನಾಭರಣ ಬ್ಯಾಂಕ್‌ನಲ್ಲಿ ಅಡವಿಟ್ಟು ಹಣ ತಂದಿದ್ದರು. ಕುಟುಂಬ ಸಮೇತ ಮನೆಗೆ ಬೀಗ ಹಾಕಿ ತಿಪಟೂರಿನ ಸಂಬಂಧಿಕರ ಮನೆಗೆ ತೆರಳಿದ್ದರು. ಬೆಳಿಗ್ಗೆ ಪಕ್ಕದ ಮನೆಯವರು ಕರೆ ಮಾಡಿ ಮನೆ ಬಾಗಿಲು ತೆರೆದಿದೆ ಎಂದು ತಿಳಿಸಿದಾಗ ತಿಪಟೂರಿನಿಂದ ಬಂದಿದ್ದು ಪರಿಶೀಲಿಸಿದಾಗ ಕಳ್ಳತನವಾಗಿರುವುದು ತಿಳಿದಿದೆ.

ಬಲವಾದ ಆಯುಧದಿಂದ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 43 ಗ್ರಾಂ ತೂಕದ ಚಿನ್ನದ ನಕ್ಲೇಸ್, 6 ಗ್ರಾಂ ತೂಕದ ಚಿನ್ನದ ಕೈಚೈನ್, 4 ಗ್ರಾಂ ತೂಕದ ಒಂದು ಜೊತೆ ಓಲೆ, 4 ಜೊತೆ ಬೆಳ್ಳಿ ಚೈನ್, 2 ಜೊತೆ ಬೆಳ್ಳಿಯ ಕಾಲುಂಗುರ ಹಾಗೂ 6 ಲಕ್ಷ ರೂ. ಕಳವು ಮಾಡಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪ್ರತಿಭೆ ಅನಾವರಣಕ್ಕೆ ಪಠ್ಯೇತರ ಚಟುವಟಿಕೆ ಪೂರಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಕಲಗೂಡು: ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಅವರ ಪ್ರತಿಭೆ ಅನಾವರಣಗೊಳಿಸಲು ಅತ್ಯುತ್ತಮ ವೇದಿಕೆಯಾಗಿದೆ ಹಾಸನ ಲೆಕ್ಕಪತ್ರ ಇಲಾಖೆಯ ಹಿರಿಯ ಉಪ ನಿರ್ದೇಶಕ ಡಾ. ಅಶೋಕ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಳೇ ಮೆಲುಕು ಹೊಸ ಮೆರಗು ಎಂಬ ಶೀರ್ಷಿಕೆಯಡಿ ನಡೆದ ಸಹಪಠ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿ ಅವರು, ಇಂದು ವಿದ್ಯೆ ಕಲಿಯುತ್ತಿರುವ ವಿದ್ಯಾರ್ಥಿಗಳ ಜೊತೆಯಲ್ಲಿಯೇ ಪಠ್ಯೇತರ ಚಟುವಟಿಕೆಗಳು ನಡೆಯುತ್ತಿವೆ. ಇದನ್ನು ಬಳಕೆ ಮಾಡಿಕೊಳ್ಳುವಲ್ಲಿ ಹಿಂದೆ ಬೀಳಬಾರದು. ಇವುಗಳಲ್ಲಿ ಹೆಚ್ಚು ತೊಡಗಿಕೊಳ್ಳುವುದು ಮುಂದಿನ ಭವಿಷ್ಯಕ್ಕೆ ಸಹಕಾರಿಯಾಗಲಿದೆ ಎಂದರು.




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಮಹೇಶ ಅವರು, ಕಾಲೇಜಿನ ವಿದ್ಯಾರ್ಥಿಗಳು ಸಹಪಠ್ಯ ಚಟುವಟಿಕೆಗಳ ವೇದಿಕೆ ಮೂಲಕ ನಾಯಕತ್ವದ ಗುಣ, ವ್ಯಕ್ತಿತ್ವ ವಿಕಸನ, ಶಿಸ್ತು, ಸಮಯ ಪಾಲನೆಗಳು ರೂಢಿಸಿಕೊಳ್ಳಬಹುದಾಗಿದೆ. ಈಗಾಗಲೇ ನಮ್ಮ ಕಾಲೇಜಿನಲ್ಲಿ ಕೈಗೊಂಡಿರುವ ಚಟುವಟಿಕೆಗಳ ಆಧಾರದ ಮೇಲೆ ಅತ್ಯುತ್ತಮ ದಾಖಲಾತಿ ಪ್ರಾರಂಭವಾಗಿದೆ.

ಮುಂದಿನ ದಿನಗಳಲ್ಲಿ ಕಾಲೇಜಿನ ದಾಖಲಾತಿ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. ಪದವಿ ಪಡೆದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ಎ.ಆರ್. ಬಾಲಾಜಿ, ಸದಸ್ಯರಾದ ರವಿಕುಮಾರ್, ನಿರ್ಮಲ, ಚಿದಂಬರ, ಎಲ್ಲ ಬೋಧಕ ವರ್ಗದವರು ಅತಿಥಿ ಉಪನ್ಯಾಸಕರು ಕಾಲೇಜಿನ ಸಿಬ್ಬಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.


ಕಾರ್ಯಕ್ರಮದಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

## ಮೇ 24ಕ್ಕೆ ಚನ್ನರಾಯಪಟ್ಟಣದಲ್ಲಿ ತಿರಂಗಾ ಯಾತ್ರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ನಾವೆಲ್ಲ ಭಾರತೀಯರು ಭಾರತಾಂಬೆಯ ಮಕ್ಕಳು, ಇತ್ತೀಚಿನ ಘಟನೆಗಳು ನಮ್ಮ ಹೃದಯ ಹೊಕ್ಕಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ಹಿಂದು ಹಿತರಕ್ಷಣಾ ವೇದಿಕೆಯಿಂದ ತಿರಂಗ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಅಹಿಂಸಾವಾದಿ, ಡಾ. ಬಿ.ಆರ್. ಅಂಬೇಡ್ಕರ್ ಸಂವಿಧಾನ ನೀಡಿದ್ದಾರೆ. ವಿಶ್ವದಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದು. ತಿರಂಗ ಯಾತ್ರೆ, ದೇಶದ ಸೈನಿಕರಿಗೆ ನೀಡುತ್ತಿರುವ ಗೌರವವಾಗಿದೆ. ಭಾರತ ದೇಶ ಎರಡು ಯುದ್ಧಗಳಲ್ಲೂ ಜಯಗಳಿಸಿ ತನ್ನ ಶಕ್ತಿ ಸಾಮರ್ಥ್ಯವನ್ನ ವಿಶ್ವಕ್ಕೆ ತೋರ್ಪಡಿಸಿದೆ. ಪಾಕ್ ಆಕ್ರಮಿತ ಕಾಶ್ಮೀರ ಎಂದೆಂದಿಗೂ ನಮ್ಮದೆ. ಕಿಡಿಗೇಡಿಗಳ ಕಾರ್ಯವನ್ನ ದೇಶ ಒಪ್ಪುವುದಿಲ್ಲ. ನಮ್ಮ ದೇಶದ ಭೂ ಸೇನೆ, ವಾಯುಪಡೆ, ನೌಕಾಪಡೆಗೆ ನಾವು ಗೌರವ ಸಲ್ಲಿಸಬೇಕು. ಯೋಧರಿಗೆ ಧೈರ್ಯ ತುಂಬಬೇಕು-ಧನ್ಯವಾದ ಹೇಳಬೇಕು. ದೇಶದ ಭದ್ರತಾ ಪಡೆ, ಆಯಾ ಕಾಲಘಟ್ಟದಲ್ಲಿ ತನ್ನ ಶಕ್ತಿ, ಸಾಮರ್ಥ್ಯವನ್ನ ಪ್ರದರ್ಶನ ಮಾಡಿದೆ. ಮೇ 24ರಂದು ಬೃಹತ್ ತಿರಂಗ ಯಾತ್ರೆ ಬೆಳಗ್ಗೆ 9 ಗಂಟೆಗೆ 40 ಅಡಿ ಆಂಜನೇಯ ದೇವಾಲಯದ ಆವರಣದಿಂದ ಮೆರವಣಿಗೆ ಆರಂಭವಾಗಲಿದೆ. 500 ಮೀಟರ್ ಉದ್ದದ ರಾಷ್ಟ್ರಧ್ವಜದ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ ಎಂದರು.



ಬಿಜೆಪಿ ಮುಖಂಡ ಅಣತಿ ಆನಂದ್ ಮಾತನಾಡಿ, ದೇಶ ಭಯೋತ್ಪಾದನೆಯನ್ನು ಎಂದು ಸಹಿಸದು, ಪಾಕಿಸ್ತಾನಕ್ಕೆ ತಕ್ಕ ಉತ್ತರವನ್ನು ನಮ್ಮ ದೇಶ ನೀಡಿದೆ.

ತಿರಂಗ ಯಾತ್ರೆ ದೇಶಕ್ಕೆ ಸೈನ್ಯಕ್ಕೆ ಶಕ್ತಿ ತುಂಬುವುದಾಗಿದೆ ಎಂದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರೀಶ್ ನಿಂಬೇಹಳ್ಳಿ, ರೈತ ಮುಖಂಡರಾದ ಮೀಸೆ ಮಂಜಣ್ಣ, ಅರಳಾಪುರ ಮಂಜೇಗೌಡ, ಹಿಂದು ಸಂಘಟನೆಯ ಮುಖಂಡರಾದ ಶಂಕರಣ್ಣ, ಮನೋಹರ್ ಗಜಾನನ, ಪರಿಸರ ಪ್ರೇಮಿ ಸಿ.ಎನ್. ಅಶೋಕ್, ವೆಂಕಟರಮಣ, ಬಿಜೆಪಿ ಕುಮಾರ್ ಮಾತನಾಡಿ, ಬೃಹತ್ ತಿರಂಗ ಯಾತ್ರೆ ಯಶಸ್ವಿಯಾಗಲು ಎಲ್ಲರ ಸಹಕಾರ ಅಗತ್ಯ. ದೇಶದ ಸೈನಿಕರ ಹೋರಾಟದ ಘೋಷಣೆಗಳನ್ನು, ದೇಶಭಕ್ತಿಯನ್ನು ಹೆಚ್ಚಿಸುವ ಘೋಷಣೆಗಳನ್ನು ಕೂಗುವುದು ರಾಷ್ಟ್ರಧ್ವಜ ಹಿಡಿದು ಮೆರವಣಿಗೆಯಲ್ಲಿ ಸಾಗುವುದು, ದೇಶಕ್ಕೆ ಹೆಮ್ಮೆ ತರುವಂತೆ ನಡೆದುಕೊಳ್ಳುವುದು ಆಗಬೇಕೆಂಬ ಸಲಹೆಗಳು ಬಂತು ಘೋಷವಾಕ್ಯ ಕರಪತ್ರ ಹಂಚಿಕೆಯಾಗಲಿದೆ.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ, ನಂತರ ಆಂಜನೇಯ ದೇವಾಲಯದ ಆವರಣದಲ್ಲಿ ಬೌದ್ಧಿಕ ಸಭೆ ನಡೆಸಲಾಗುವುದೆಂದು ಮನೋಹರ್ ತಿಳಿಸಿದ್ದಾರೆ.

ಮಾಜಿ ಸೈನಿಕ ಕ್ಯಾಪ್ಟನ್ ವೆಂಕಟೇಶ್ ನೇತೃತ್ವದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸೈನ್ಯಕ್ಕೆ ಸೇರ ಬಯಸುವ ಯುವಕರಿಗೆ ತರಬೇತಿಯನ್ನು ತಾಲ್ಲೂಕಿನಲ್ಲಿ ನೀಡಲಾಗುತ್ತಿದೆ. ತರಬೇತಿಯ ಸಂದರ್ಭದಲ್ಲಿ ಗಣಪತಿ ಪೆಂಡಾಲ್ ಸೇವಾ ಸಮಿತಿ ಹಾಗೂ ವಿವಿಧ ಸಂಘಟನೆಗಳು ಸಹಕಾರ ನೀಡುತ್ತಿರುವುದನ್ನು ಸ್ಮರಿಸಲಾಯಿತು.

## ಇತಿಹಾಸದಲ್ಲಿ ಈ ದಿನ

### ಮೇ -20

1498: ವಾಸ್ಕೋ ಡಿ ಗಾಮಾ ಭಾರತ ತಲುಪಿದರು. ಪೋರ್ಚುಗೀಸ್ ಸಾಗರಯಾನಿಕ ವಾಸ್ಕೋ ಡಿ ಗಾಮಾ, 1498ರಂದು ಭಾರತಕ್ಕೆ ಕಾಲಿಟ್ಟರು. ಅವರು ಕೊಝಿಕೋಡ್ (ಕಾಲಿಕಟ್), ಕೇರಳದಲ್ಲಿ ಭೂಖಂಡ ತಲುಪಿದ ಮೊದಲ ಯುರೋಪಿಯನ್ ಎನಿಸಿದರು.

1965: ಅವತಾರ್ ಸಿಂಗ್ ಚೀಮಾ ಎವರೆಸ್ಟ್ ಶಿಖರಾರೋಹಣ. ಅವತಾರ್ ಸಿಂಗ್ ಚೀಮಾ ಎವರೆಸ್ಟ್ ಶಿಖರವನ್ನು ಹತ್ತಿದ ಮೊದಲ ಭಾರತೀಯ ಯೋಧ.

2011: ಪ್ರೇಮಲತಾ ಅಗರ್ವಾಲ್ ಎವರೆಸ್ಟ್ ಹತ್ತಿದ ಅತಿದೊಡ್ಡ ವಯಸ್ಸಿನ ಭಾರತೀಯ ಮಹಿಳೆ.

2020: ಪಶ್ಚಿಮ ಬಂಗಾಳಕ್ಕೆ ಅಂಪನ್ ಚಂಡಮಾರುತ ಅಪ್ಪಳಿಸಿತು. ಈ ಚಂಡಮಾರುತದಿಂದ ಭಾರೀ ಆಸ್ತಿಪಾಸ್ತಿ ಹಾನಿ ಮತ್ತು ಅನೇಕ ಜೀವಹಾನಿ ಸಂಭವಿಸಿತು.

#### ಜನನ

1918: ಪಿರು ಸಿಂಗ್ ಶೇಖಾವತ್. ಪರಂವೀರ ಚಕ್ರ ಪುರಸ್ಕೃತ ಭಾರತೀಯ ಯೋಧ.

1923: ಎನ್.ಟಿ. ರಾಮಾ ರಾವ್. ಪ್ರಸಿದ್ಧ ತೆಲುಗು ನಟ ಮತ್ತು ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ.

#### ಮರಣ

1932: ಬಿಪಿನ್ ಚಂದ್ರ ಪಾಲ್. ಸ್ವಾತಂತ್ರ್ಯ ಹೋರಾಟಗಾರ, ಲೇಖಕ ಮತ್ತು ಸಮಾಜ ಸುಧಾರಕ.

1953: ಸ್ವಾಮಿ ಬ್ರಹ್ಮಾನಂದ ಸರಸ್ವತಿ. ಜ್ಯೋತಿರ್ಮಠದ ಶಂಕರಾಚಾರ್ಯರು, ವೇದಾಂತದ ಪ್ರಸಿದ್ಧ ಗುರು.

1994: ಕಾಸು ಬ್ರಹ್ಮಾನಂದ ರೆಡ್ಡಿ. ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ಕೇಂದ್ರ ಗೃಹ ಸಚಿವರಾಗಿದ್ದವರು.

1957: ತಂಗುತೂರಿ ಪ್ರಕಾಶಂ. ಆಂಧ್ರ ಪ್ರದೇಶದ ಮೊದಲ ಮುಖ್ಯಮಂತ್ರಿ ಮತ್ತು ಸ್ವಾತಂತ್ರ್ಯ ಹೋರಾಟಗಾರ.

## ಅವೈಜ್ಞಾನಿಕ ಒಳಚರಂಡಿ: ಬೆಸ್ತು ಬಿದ್ದ ಜನತೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಬೇಲೂರು: ವಿಶ್ವಪ್ರಸಿದ್ಧ ತಾಣಗಳ ಮೂಲಕ ಪಟ್ಟಣ ಯುನೆಸ್ಕೋ ಪಟ್ಟಿಗೆ ಸೇರಿದರೂ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ.

ಬೇಲೂರು ಪುರಸಭೆ 23 ವಾರ್ಡ್ ಹೊಂದಿದೆ. ವೇಗವಾಗಿ ಅಭಿವೃದ್ಧಿಗೊಳ್ಳುತ್ತಿರುವ ವಾರ್ಡ್‌ಗಳಲ್ಲಿ 13, 12, 16ನೇ ವಾರ್ಡ್‌ಗಳು ಒಳಗೊಂಡಂತೆ ಒಳ ಚರಂಡಿ ನಿರ್ಮಾಣವಾಗಿ ಸುಮಾರು 30 ವರ್ಷ ಕಳೆದರೂ ಗಂಭೀರ ಸಮಸ್ಯೆ ಇಲ್ಲಿವರೆಗೂ ಪರಿಹಾರ ಕಂಡಿಲ್ಲ. ಪುರಸಭಾ ಅಧ್ಯಕ್ಷ ಎ.ಆರ್. ಅಶೋಕ್ ಬೇಲೂರು ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ನೀಲನಕ್ಷೆ ತಯಾರಿಸಿ ನೂತನವಾಗಿ ಒಳಚರಂಡಿ ಕಾಮಗಾರಿ ನಡೆಸುವ ಅವಶ್ಯಕತೆ ಇದೆ. ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ನೂತನವಾಗಿ ಭಸ್ಮೀಕರಣ ಹೊಂಡ ತೆಗೆದಿರುವ ಗುಂಡಿಯನ್ನು ಶೀಘ್ರವಾಗಿ ಮುಚ್ಚಿ ಮುಂದಾಗುವ ವಾಹನ ಅಪಘಾತ ಇರಬಹುದು. ಶಾಲೆಗೆ ತೆರಳುವ ಮಕ್ಕಳು, ಜಾನುವಾರು ಹಾಗೂ ವಯೋವೃದ್ಧರಿಗೆ ನಡೆದಾಡಲು ಅನುವು ಮಾಡಿಕೊಡಬೇಕಾಗಿದೆ.



ಬೇಲೂರು ಪುರಸಭಾ ಅಧ್ಯಕ್ಷರ ವಾರ್ಡ್‌ನಲ್ಲಿ ಒಳಚರಂಡಿ ಸಮಸ್ಯೆ ನಿರಂತರವಾಗಿದೆ. ಒಂದಲ್ಲ ಒಂದು ಒಳಚರಂಡಿ ಭರ್ತಿಯಾಗಿ ಮಲಮೂತ್ರ ಒಳಗೊಂಡ ಅಶುದ್ಧ ನೀರು ಘನ ತ್ಯಾಜ್ಯ. ವಸ್ತುಗಳು ಸಾರ್ವಜನಿಕರು ಓಡಾಡುವ ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿದೆ. ದೇಶ ವಿದೇಶದಿಂದ ಬರುವ ಪ್ರವಾಸಿಗರು ಧರ್ಮಸ್ಥಳ, ಹೊರನಾಡು, ಶೃಂಗೇರಿ, ಕುಕ್ಕೆಸುಬ್ರಹ್ಮಣ್ಯ ಮುಂತಾದ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಬೇಲೂರಿನಿಂದ ಹಾದುಹೋಗುವ ದಾರಿಯಲ್ಲಿ ಈ ಗಬ್ಬು ವಾಸನೆ ಮತ್ತು ಕೊಳಚೆ ನೀರನ್ನು ದಾಟಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯ ನಿವಾಸಿಗಳು ಈ ಗಂಭೀರ ಸಮಸ್ಯೆಯಿಂದ ಕಾಯಿಲೆ ಬಿದ್ದಿದೆ. ಆಸ್ಪತ್ರೆಗೆ ದಾಖಲಾಗಿರುವ ನಿರ್ದೇಶನಗಳಿವೆ. ಹಾಗಾಗಿ ಸಂಬಂಧಪಟ್ಟ ಇಲಾಖೆಯವರು ಇತ್ತ ಗಮನಹರಿಸಿ ಮುಂದಾಗುವ ಬಾರಿಯ ಅನಾಹುತ ತಪ್ಪಿಸಿ ಸಾರ್ವಜನಿಕರ ಆರೋಗ್ಯಕರ ಜೀವನ ನಡೆಸಲು ಅನುವು ಮಾಡಿಕೊಡಬೇಕಾಗಿ ಕೋರಲಾಗಿದೆ.

ಸಾಮಾಜಿಕ ಹೋರಾಟಗಾರ ನೂರ್ ಅಹಮ್ಮದ್ ಮಾತನಾಡಿ, ಪುರಸಭೆ ವ್ಯಾಪ್ತಿಗೆ ಸೇರಿದ 16ನೇ ವಾರ್ಡ್‌ನಲ್ಲಿ ಯಾವುದೇ ರೀತಿಯ ಒಳಚರಂಡಿ ಇರುವುದಿಲ್ಲ. ಬಹುಮಹಡಿ ಕಟ್ಟಡಗಳ ಒಳಚರಂಡಿ ನೀರನ್ನು ಅಕ್ರಮವಾಗಿ ಮತ್ತು ಅವೈಜ್ಞಾನಿಕವಾಗಿದೆ. ರಾಷ್ಟ್ರೀಯ ಹೆದ್ದಾರಿ ಕತ್ತರಿಸುವ ಮೂಲಕ ರಾತ್ರೋರಾತ್ರಿ ಸಂಪರ್ಕ ನೀಡುವದರಿಂದ ಈ ಸಮಸ್ಯೆ ಉದ್ಭವವಾಗಿದೆ. ಈ ಸಮಸ್ಯೆಯಿಂದ ಸಾರ್ವಜನಿಕರು ಕಾಯಿಲೆ ಬಿದ್ದು ಆಸ್ಪತ್ರೆಗೆ ದಾಖಲಾಗಿ ಹಾಗೂ ಶಾಲೆಗೆ ಹೋಗುವ ಮಕ್ಕಳಿಗೆ ತೊಂದರೆಯಾಗಿದೆ. ನಿರಂತರವಾಗಿ ಈ ಸಮಸ್ಯೆ ಕಾಡುತ್ತಿದೆ. ಸಂಬಂಧಪಟ್ಟವರು ತನಿಖೆ ನಡೆಸಬೇಕಾಗಿ ಕೋರುತ್ತೇನೆ. ಇಲ್ಲವಾದಲ್ಲಿ ರಾಷ್ಟ್ರೀಯ ಹೆದ್ದಾರಿ ಸ್ಥಳೀಯ ನಿವಾಸಿಗಳ ಜೊತೆಗೂಡಿ ಹೆದ್ದಾರಿ ಬಂದ್ ಮಾಡಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

## ಬಿಬಿಎ ಪಡೆದವರಿಗೆ ವಿಪುಲ ಉದ್ಯೋಗಾವಕಾಶ




ಹಾಸನ: ಅನೇಕ ಕ್ಷೇತ್ರಗಳಲ್ಲಿ ಬಿಬಿಎ ಕೋರ್ಸ್‌ಗೆ ಬೇಡಿಕೆಯಿದ್ದು ಸುಲಭವಾಗಿ ಉದ್ಯೋಗಾವಕಾಶ ಗಿಟ್ಟಿಸಿಕೊಳ್ಳಬಹುದು ಎಂದು ಬೆಂಗಳೂರಿನ ಬೆಸ್ಕಾಂ ಅಧಿಕಾರಿ ಕೆ.ಎಲ್. ಧರಣೇಶ್ ಹೇಳಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ಮತ್ತು ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಬಿಬಿಎ ಕೋರ್ಸ್ ಯಾವ ಕೋರ್ಸ್‌ಗೂ ಕಡಿಮೆ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಬಿಬಿಎಗೆ ಬೇಡಿಕೆಯಿದೆ. ದೃಢ ಮನಸ್ಸಿನಿಂದ ಗುರಿ ಸಾಧಿಸುವ ಛಲ ಇರಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮುಂದೆ ಗುರಿ ಹಿಂದೆ ಗುರು ಮತ್ತು ದೃಢ ಸಂಕಲ್ಪ ಇದ್ದರೆ ಏನನ್ನಾದರೂ ಸಾಧಿಸಬಹುದು. ತಿದ್ದಿ ಬುದ್ಧಿ ಹೇಳಿ ಭವಿಷ್ಯದ ಸರಿ ಮಾರ್ಗ ತೋರುವ ಗುರು ಮತ್ತು ಛಲದಿಂದ ಗುರಿಯನ್ನು ಸಾಧಿಸುವ ಮನೋಭಾವವನ್ನು ವಿದ್ಯಾರ್ಥಿನಿಯರು ರೂಢಿಸಿಕೊಳ್ಳಬೇಕು. ಆಗಮಾತ್ರ ಯಶಸ್ಸು ಲಭಿಸುತ್ತದೆ ಎಂದು ಹೇಳಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248